**ಸಾಕ್ಷಿಯನ್ನು ಇಂದು ದಿನಾಂಕ 06.04.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಸ್. ಬಿ. ಎಮ್. ಪ್ರತಿವಾದಿ ಪರ ವಕೀಲರಿಂದ**

ಸಾಕ್ಷ್ಯಪ್ರಮಾಣ ಪತ್ರದಲ್ಲಿ ಬರೆದ ಎಲ್ಲ ಸಂಗತಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ವಾದಿ 1 ನೇ ಪ್ರತಿವಾದಿಯನ್ನು ಈಗ 28 ವರ್ಷಗಳ ಹಿಂದೆ ವಿವಾಹ ಆಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರ ವಿವಾಹ 1984-85 ರಲ್ಲಿ ಆಗಿರುತ್ತದೆ. ಹಾಗೇ 1984-85 ರಲ್ಲಿ ವಿವಾಹವಾಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅವರ ವಿವಾಹ ಸಮಾರಂಭದಲ್ಲಿ ಪಾಲ್ಗೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿವಾಹವಾದ ನಂತರ ವಾದಿ 1 ನೇ ಪ್ರತಿವಾದಿಯೊಂದಿಗೆ ಬಾಳ್ವೆ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರಿಬ್ಬರಿಗೂ ಅಬ್ದುಲ ಅಲೀಮ ಎಂಬುವ ಮಗ ಹುಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಗರ್ಭಿಣಿಯಾಗಿರುವಾಗ ತವರು ಮನೆಗೆ ಹೋಗಿರುವುದಾಗಿ ಆಗ 1 ನೇ ಪ್ರತಿವಾದಿ 2 ನೇ ಪ್ರತಿವಾದಿಯನ್ನು ವಿವಾಹವಾಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ 1 ನೇ ಪ್ರತಿವಾದಿಯ ವಿರುದ್ಧ ಜೀವನಾಂಶ ಕೋರಿ ದಾವೆ ಸಲ್ಲಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಪ್ರಕಾರ ನ್ಯಾಯಾಲಯ ಜೀವನಾಂಶ ಆದೇಶ ಪಾಸು ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಗ್ರಾಮದ ಚಿತ್ತಾಪುರದ ಖಾಜಿಯವರ ಆಳ್ವಿಕೆಯ ಒಳಗೆ ಬರುತ್ತದೆ ಎಂಬುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ನಿಖಾಹನಾಮೆಯನ್ನು ನಮ್ಮ ಗ್ರಾಮದ ಖಾಜಿ ಅಳವಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ವಾದಿಯನ್ನು ವಿವಾಹ ಆಗಿಲ್ಲ ಆದ್ದರಿಂದ ನಿಖಾಹಾನಾಮೆ ಅಳವಡಿಕೆ ಮಾಡುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯ ಶಾಂತಿಗೆ ವಾದಿ ಮತ್ತು ವಾದಿಯ ಮಗ ಬಂದಿರುವುದಾಗಿ ಆಗ 1 ನೇ ಪ್ರತಿವಾದಿಯೊಂದಿಗೆ ಜಗಳವಾಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಮೀನಾಬೀ ಗಂಡ ಮಕ್ಬೂದ ಹುಸೇನ ನನ್ನ ತಾಯಿ ಎಂದರೆ ಸರಿ. ಅವರು 3-4 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ ಎಂದರೆ ಸರಿ. ನಮ್ಮ ತಾಯಿಯ ಮೃತ ದೇಹವನ್ನು ಮಶೀದಿಯ ಒಳಗೆ ತಂದು ಸ್ಮಶಾನಕ್ಕೆ ಒಯ್ಯುತ್ತಿರುವಾಗ ನನಗೂ ಮತ್ತು 1 ನೇ ಪ್ರತಿವಾದಿಯಗೂ ಜಗಳವಾಗಿರುತ್ತದೆ ಎಂದರೆ ಸರಿಯಲ್ಲ. ಆ ಜಗಳದ ಹಗೆ ಸಾದಿಸುವ ಉದ್ದೇಶದಿಂದ 1 ನೇ ಪ್ರತಿವಾದಿಯ ವಿರುದ್ಧ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಸಿವಿಲ್ ನ್ಯಾಯಾಧೀಶರು

ಸೇಡಂ.

*SYH